## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

ಸಿ.ಸಿ. ನಂ– 397/2020

Cw–4 Pw–2

| | |
|---|---|
| ಹೆಸರು | ಮಂಜುನಾಥ ತಂದೆ ಸದಾಶಿವ ಜೋರಾಪೂರ |
| ವಯಸ್ಸು | 29 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಜಮಖಂಡಿ |

ದಿನಾಂಕಃ06–01–2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ–**

ದಿನಾಂಕ 23–11–2019 ರಂದು ಜಮಖಂಡಿಯ ಲಕ್ಕನಕೆರೆ ಹತ್ತಿರ ಎರಡು ಮೊಟಾರ ಸೈಕಲ ಮತ್ತು ಕಾರ ವಾಹನದ ನಡುವೆ ಅಪಘಾತವಾಗಿದ್ದು ಆ ಕಾಲಕ್ಕೆ ನಾನು ಚಾಸಾ–5 ರವರು ಸ್ಥಳಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಹೋಗಿ ಸ್ಥಳ ಪಂಚನಾಮೆಗೆ ಸಾಕ್ಷಿ ಯಾಗಿ ಮದ್ಯಾಹ್ನ 03–30 ಯಿಂದ 04–30 ಗಂಟೆಗೆ ಸಹಿ ಮಾಡಿರುತ್ತೇನೆ . ಆ ಕಾಲಕ್ಕೆ ಪೋಲಿಸರು ಎರಡು ಪೊಟೋವನ್ನು ತೆಗೆದು ಕಚ್ಚಾ ನಕಾಶೆಯನ್ನು ತೆಗೆದು ಸ್ಥಳ ಪಂಚನಾಮೆಗೆ ನಮ್ಮ ಇಬ್ಬರ ಸಹಿಗಳನ್ನು ಪಡೆದುಕೊಂಡಿರುತ್ತಾರೆ . ಈಗ ಸಾಕ್ಷಿಗೆ ಈಗಾಗಲೇ ಗುರುತಿಸಿದ ನಿಪಿ–2 ಮತ್ತು 3 ನ್ನು ತೋರಿಸಲಾಗಿ ಅದರಲ್ಲಿ ತಾನು ಮತ್ತು ಚಾಸಾ–5 ರವರು ಹಾಜರು ಇದ್ದ ಬಗ್ಗೆ ನೋಡಿ ಗುರುತಿಸುತ್ತಾರೆ ಮತ್ತು ಅವುಗಳನ್ನು ಪೋಲಿಸ ಠಾಣೆಯಲ್ಲಿ ತೆಗೆಸಿದ ಬಗ್ಗೆ ಸಾಕ್ಷಿ ನೋಡಿ ಒಪ್ಪುತ್ತಾರೆ . ನಮ್ಮ ಸಮಕ್ಷಮ ಒಂದು ದ್ವಿಚಕ್ರ ವಾಹನ ಮತ್ತು ಕಾರ ವಾಹನವನ್ನು ತೋರಿಸಿ ಅವುಗಳನ್ನು ಅದೇ ದಿನ ಅಂದಾಜು ಮದ್ಯಾಹ್ನ 04–30 ಯಿಂದ 05–30 ವರೆಗೆ ಜಪ್ತಿ ಪಡಿಸಿಕೊಂಡಿರುತ್ತಾರೆ .

ಸಾಕ್ಷಿಗೆ ಸ್ಥಳ ಪಂಚನಾಮೆ ತೋರಿಸಿದ್ದು ಅದನ್ನು ನಿಪಿ–7 ಎಂದು ಸಾಕ್ಷಿ ಸಹಿಯನ್ನು ನಿಪಿ–7 ಎ ಎಂದು , ಕಚ್ಚಾ ನಕಾಶೆ ನೋಡುತ್ತಿದ್ದು ಅದನ್ನು ನಿಪಿ- 8 ಎಂದು ಸಾಕ್ಷಿ ಸಹಿಯನ್ನು ನಿಪಿ –8 ಎ ಎಂದು , ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ- 9 ಮತ್ತು 10 ಎಂದು , ವಾಹನ ತಡೆ ಪಂಚನಾಮೆ ನೋಡುತ್ತಿದ್ದು ಅದನ್ನು ನಿಪಿ- 11 ಎಂದು ಸಾಕ್ಷಿ ಸಹಿಯನ್ನು ನಿಪಿ- 11 ಎ ಎಂದು ಗುರುತಿಸಲಾಯಿತು . ವಾಹನ ತಡೆ ಪಂಚನಾಮೆ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ- 2 ಮತ್ತು 3 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃಶ್ರೀ ಯು ಎಚ್ ಕೆ ಆರೋಪಿ ಪರ ವಕೀಲರಿಂದಃ-**

ನಾನು ಜಮಖಂಡಿಯ ಚೌಡಯ್ಯಾನಗರ ದಲ್ಲಿ ವಾಸ ಮಾಡುತ್ತೇನೆ . ಮೃತ ಪಟ್ಟ ವ್ಯಕ್ತಿ ಮತ್ತು ಆತನ ಹೆಂಡತಿ ಚಾಸಾ-1 ರವರು ಸಹ ಚೌಡಯ್ಯಾನಗರ ನಿವಾಸಿಗಳು ಆಗಿರುತ್ತಾರೆ ಎಂದರೆ ಸರಿ . ಚಾಸಾ-1 ಮತ್ತು ಮೃತ ವ್ಯಕ್ತಿಯ ಸಂಬಂದಿಕರ ಪರಿಚಯು ಇದೆ . ಚಾಸಾ-1 ರವರ ಗಂಡ ಮತ್ತು ನಾನು ಪರಿಚಯ ಇದ್ದ ಕಾರಣ ಕೆಲಸಗಳು ಮಾಡುತ್ತಿದ್ದೇವು ಎಂದರೆ ಸರಿ . ಚಾಸಾ-6 ಸಹ ಚೌಡಯ್ಯಾನಗರ ನಗರದಲ್ಲಿ ವಾಸವಾಗಿರುತ್ತಾರೆ ಆತನು ಸಾಕಷ್ಟು ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ .

ಪಂಚನಾಮೆಗೆ ನನಗೆ ಪೋಲಿಸರು ಕರೆದಿರುತ್ತಾರೆ . ಸ್ಥಳ ಪಂಚನಾಮೆ ಜಾಗೆಯನ್ನು ನಾನೇ ತೋರಿಸಿರುತ್ತೇನೆ . ಪಂಚನಾಮೆ ಬರೆಯಲು ನಾನು ಮಾಹಿತಿ ಬರೆದಿರುವದಿಲ್ಲ . ಅಪಘಾತವಾದ ಸ್ಥಳದಿಂದ ಪೋಲಿಸ ಠಾಣೆಗೆ ಅಂದಾಜು 05-10 ನಿಮಿಷಗಳಲ್ಲಿ ಹೋಗಿರುತ್ತೇವೆ . ವಾಹನಗಳಿಗೆ ಜಖಂ ಅದ ಬಗ್ಗೆ ನಾನು ನೋಡಿರುವದಿಲ್ಲ . ನಾನು ಮತ್ತು ಚಾಸಾ-1 ರವರು ಒಂದೇ ಓಣಿಯವರು ಅದ ಕಾರಣ ಅವರಿಗೆ ಸಹಾಯ ಮಾಡಲು ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಅಪಘಾತ ಸ್ಥಳದಲ್ಲಿ ರಸ್ತೆಯ ಡಿವೈಡರ ಇರುವದಿಲ್ಲ . ಅದೇ ದಿನ ಪೋಲಿಸ ಠಾಣೆಗೆ ಹೋಗಿ ಎರಡು ವಾಹನಗಳು ಜಪ್ತಿ ಪಡಿಸಿಕೊಂಡ ಬಗ್ಗೆ ಮತ್ತು ವಾಹನ ತಡೆ ಪಂಚನಾಮೆಯನ್ನು ಮಾಡಿ ಪೋಟೋಗಳನ್ನು ತೆಗೆಸಿದ ಬಗ್ಗೆ ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ